ಜನರ ಮೇಲೆ ಈಗಾಗಲೇ ಮೊಕದ್ದಮೆ ಹೂಡಿದ್ದಾರಂತೆ. ಅವರೆಲ್ಲರೂ ಊರು ಬಿಟ್ಟು ಇಲ್ಲಿಗೆ ಓಡಿ ಬಂದುಬಿಟ್ಟಿದ್ದಾರೆ. ಇದರ ಬಗ್ಗೆ ಹಲವಾರು ಜನ ಸದಸ್ಯರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಮೊನ್ನೆ ರಂಜಾನ್ ಹಬ್ಬವಿತ್ತಲ್ಲಾ ಆ ದಿನವೇ ಜೈನ ದೇವರ ಪ್ರತಿಷ್ಠಾವನೆ ಇತ್ತು. ಅವರ ತೀರ್ಥಂಕರ ಗುಡಿಯನ್ನು ಕಟ್ಟಿಸಿದ್ದರು. ಆಗ ಆ ರೀತಿಯಾಗಿದೆ.

ಅಧ್ಯಕ್ಷರು:- ಸಿರಗುಪ್ಪದಲ್ಲಿ ವಾಸವಿರತಕ್ಕ ಇಡೀ ಜೈನ ಸಮಾಜದ ಸಂಖ್ಯೆ 70 ಇಲ್ಲವೆ 80. ಅದರಲ್ಲಿ ಅರ್ಧಭಾಗದಷ್ಟು ಜನರ ಮೇಲೆ ಮೊಕದ್ದಮೆ ಹಾಕಿದ್ದಾರಂತೆ. ಅಲ್ಲಿನ ಹೆಣ್ಣು ಮಕ್ಕಳು ಮತ್ತು ಇತರರು ಹೆದರಿಕೊಂಡು ಇಲ್ಲಿಗೆ ಬಂದುಬಿಟ್ಟಿದ್ದಾರಂತೆ. ಆದ್ದರಿಂದ ಅಲ್ಲಿನ ಅಧಿಕಾರಿಗಳ್ಯಾರಿದ್ದಾರೆ ಅವರಿಗೆ ಸೂಚನೆ ಕೊಟ್ಟು ಹಿಂಸೆ ಮಾಡದಂತೆ ಅವರುಗಳು ಊರಿಗೆ ಹೋಗಲು ಅವಕಾಶ ಮಾಡಿಕೊಟ್ಟರೆ ಸಾಕು.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು):- ಅಲ್ಲಿ ಈಗ ಶಾಂತಿ ಇದೆ. ಅದರ ಬಗ್ಗೆ ವಿಚಾರಿಸುತ್ತೇನೆ. ಅದರ ಬಗ್ಗೆ ನೋಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಅಧ್ಯಕ್ಷರೆ, ಲೂಟಿ ಬಹಳವಾಗಿದೆ, ಆದ್ದರಿಂದ ಪರಿಹಾರಕ್ಕೆ ಏನಾದರೂ ವ್ಯವಸ್ಥೆ ಮಾಡಬೇಕು. ಹೇಳಲು ಅಸಾಧ್ಯವಾದಷ್ಟು ಲೂಟಿಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಇಷ್ಟು ಲೂಟಿಯೇ ಆಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೆ, ಪರಿಹಾರಕ್ಕಿಂತ ರಕ್ಷಣೆ ಕೊಟ್ಟರೆ ಸಾಕು.

ಅಧ್ಯಕ್ಷರು:- ನನ್ನ ಅಭಿಪ್ರಾಯವೂ ಅದೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಎರಡೂ ಆಗಬೇಕೆಲ್ಲವೇ?

ಅಧ್ಯಕ್ಷರು:- ಪರಿಹಾರದ್ದನ್ನು ಪರಿಹಾರ ಮಾಡೋಣ. ಮೊದಲು ರಕ್ಷಣೆ ಮುಖ್ಯ.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೆ, ಹಾಗಾದರೆ ನಮ್ಮ ನಿರ್ಣಯ ಚರ್ಚೆಗೆ ತೆಗೆದುಕೊಳ್ಳುವುದಿಲ್ಲವೆ?

ಅಧ್ಯಕ್ಷರು:- ಮುಂದಿನ ಶುಕ್ರವಾರ ತೆಗೆದುಕೊಳ್ಳೋಣ.

ಆ. ಜಿಲ್ಲಾ ಪುನರ್‌ಎಂಗಡಣೆ ಕುರಿತು.

ಶ್ರೀ ವಾಟಾಳ್ ನಾಗರಾಜ್:- ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಸಿಕ್ಕುವುದೇ ಬಹಳ ಕಷ್ಟ. ನಿನ್ನೆಯಿಂದ ಅವರನ್ನು ಕಾಯುತ್ತಿದ್ದೆವು. ಅದೇನೋ ಇಂದು ಬೆಳಿಗ್ಗೆ ಒಂಭತ್ತೂವರೆಯಿಂದ ಇಲ್ಲಿ ಕುಳಿತುಕೊಂಡಿದ್ದಾರೆ. ಜಿಲ್ಲಾ ಪುನರ್ವಿಂಗಡಣೆಯ ಬಗ್ಗೆ ಸರ್ಕಾರದ ನಿರ್ಧಾರವಿದೆಯೆಲ್ಲಾ ಅದರ ಬಗ್ಗೆ ಈ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯವು ಮುಗಿಯುವುದರೊಳಗೆ ಅವರು ತೀರ್ಮಾನ ತೆಗೆದುಕೊಳ್ಳಬೇಕು.

ಅಧ್ಯಕ್ಷರು:- ಎಲ್ಲಾ ವಿಚಾರವನ್ನು ಸೋಮವಾರ ತೆಗೆದುಕೊಳ್ಳೋಣ. ನಿಮ್ಮ ಹಿಂದೆ ಮಾತನಾಡಲು ಇನ್ನು ಎಷ್ಟು ಜನರು ಎದ್ದಿದ್ದಾರೆ ನೋಡಿ. ಮುಖ್ಯಮಂತ್ರಿಗಳು ಇಂದು ಬೆಳಿಗ್ಗೆ ಒಂಭತ್ತೂವರೆಗೆ ಬಂದು ಇಲ್ಲಿಯವರೆಗೆ ಇದ್ದಾರೆಂದು ತಾವೇ ಹೇಳಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:- ಇವತ್ತು ಸುದೈವದಿಂದ ಅವರು ಸಿಕ್ಕಿದ್ದಾರೆ, ಆದ್ದರಿಂದ ದಯಮಾಡಿ ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು:- ಸೋಮವಾರವೂ ಸುದೈವವೇ? ನಾನು ಜಾತಕವನ್ನೆಲ್ಲಾ ತರಿಸಿ ನೋಡಿದ್ದೇನೆ, ಅಂದು ದುರ್ದೈವವೇನಿಲ್ಲ. ಅಂದು ಮುಖ್ಯಮಂತ್ರಿಗಳು ಬರುತ್ತಾರೆ.

ಶ್ರೀ ಜೆ.ಹೆಚ್. ಪಟೇಲ್:- ಈ ವಿಷಯ ಸದನದಲ್ಲಿ ಚರ್ಚೆಯಾಗಲಿ ಎನ್ನುವ ಉದ್ದೇಶದಿಂದಲೇ ರಾಜ್ಯಪಾಲರ ಭಾಷಣದಲ್ಲಿ ಆ ಬಗ್ಗೆ ಉಲ್ಲೇಖ ಮಾಡಿದ್ದೇವೆ. ಅದರ ಬಗ್ಗೆ ತಾವು ತಮ್ಮ ಸಲಹೆ ಕೊಡಿ. ಬೇರಿ ಸದಸ್ಯರುಗಳೂ ತಮ್ಮ ತಮ್ಮ ಸಲಹೆಯಗಳನ್ನು ಕೊಡಲಿ. ನಂತರ ಆ ಸಲಹೆಗಳ ಹಿನ್ನೆಲೆಯಲ್ಲಿ ನಾವು ಒಂದು ತೀರ್ಮಾನಕ್ಕೆ ಬಂದು ಸಚಿವ ಸಂಪುಟದಲ್ಲಿ ಆ ಬಗ್ಗೆ ಅಂತಿಮವಾಗಿ ನಿರ್ಣಯಿಸಿ ಸರ್ಕಾರದ ನಿರ್ಧಾರವನ್ನು ಪ್ರಕಟಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ಅದರ ಬಗ್ಗೆ ಚರ್ಚೆ ಯಾವಾಗ ಮಾಡುವುದು?

ಶ್ರೀ ಜೆ.ಹೆಚ್. ಪಟೇಲ್:- ಚರ್ಚೆ ಮಾಡಲು ಅವಕಾಶ ಮಾಡಿದ್ದೇವೆ.

ಅಧ್ಯಕ್ಷರು:- ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲೇ ಪ್ರಸ್ತಾಪ ಮಾಡಿದ್ದೇವೆ ಎಂದು ಹೇಳಿದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಮುಖ್ಯಮಂತ್ರಿಗಳು 2-3 ಸಲ ಈ ಬಗ್ಗೆ ಸ್ಟೇಟ್‌ಮೆಂಟ್ ನೀಡಿದರು. ಜಿಲ್ಲೆ ಮಾಡುತ್ತೇನೆ, ಜಿಲ್ಲಾ ಪುರ್ನವಿಂಗಡಣೆ ಮಾಡುತ್ತೇನೆ, ತಾಲ್ಲೂಕು ಮಾಡುತ್ತೇನೆ, ಗದ್ದಿಗೌಡರ ರಿಪೋರ್ಟ್ ಎಲ್ಲಾ ಇಂಪ್ಲಿಮೆಂಟ್ ಮಾಡುತ್ತೇನೆ ಎಂದು ಅವರು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಯಾವ್ಯಾವಾಗ ಈ ಬಗ್ಗೆ ಹೇಳುತ್ತಾರೋ ಆಗ ಜನ ನಾಲ್ಕು ಬಸ್ ಸುಟ್ಟು ಬಿಡುತ್ತಾರೆ. ಈಗ ಮತ್ತೆ ಅವರು ಅದರ ಬಗ್ಗೆ ಏನಾದರೂ ಹೇಳಿದರೆ ಇನ್ನೊಂದು ಎಂಟತ್ತು ಬಸ್ಸು ಹಾಗೂ ನಾಲ್ಕಾರು ಜೀವಗಳು ಹೋಗುತ್ತದೆ. ಅದಕ್ಕಾಗಿ ದಯವಿಟ್ಟು ಮಾಡುವುದಾದರೆ ನೇರವಾಗಿ ನಾನು ಮಾಡುತ್ತೇನೆ ಎಂದು ಹೇಳಿ. ಇಲ್ಲದಿದ್ದರೆ ಸಧ್ಯಕ್ಕೆ ಅದು ಆಗುವುದಿಲ್ಲ ಎಂದಾದರೂ ಹೇಳಿ. ಆದರೆ ಪ್ರತಿ ತಿಂಗಳೂ ಇದರ ಬಗ್ಗೆ ಒಂದಿಲ್ಲೊಂದು ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಮುಖ್ಯಮಂತ್ರಿಗಳು ಮೊದಲಿಗೆ ನವೆಂಬರ್ ಒಂದರಂದು ಹೊಸ ಜಿಲ್ಲೆಗಳ ಘೋಷಣೆ ಮಾಡುವುದಾಗಿ ತಿಳಿಸಿದ್ದರು. ನಂತರ ಆ ದಿನಾಂಕವನ್ನು ಮುಂದಕ್ಕೆ ಹಾಕಿ ಜನವರಿ 26 ರಂದು ಘೋಷಿಸುವುದಾಗಿ ಹೇಳಿದರು. ಆದ್ದರಿಂದ ನನಗೆ ಏನಾಗಿದೆ ಅಂದರೆ, ದಯಮಾಡಿ ನಮಗೆ ತಮ್ಮ ರಕ್ಷಣೆ ಬೇಕು. ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಇದರ ಬಗ್ಗೆ ಸೋಮವಾರ ಅಥವಾ ಮಂಗಳವಾರ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- ಮಾನ್ಯ ವಾಟಾಳ್ ನಾಗರಾಜ್‌ರವರೇ, ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು ಎಂದರೆ,ಈ ವಿಚಾರ ಸದನದಲ್ಲಿ ಚರ್ಚೆಯಾಗಬೇಕು ಎಂಬ ಅಪೇಕ್ಷೆ ಇಟ್ಟು ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸತಕ್ಕಂತಹ ಸಂದರ್ಭದಲ್ಲಿ ಎಲ್ಲರೂ ಮಾತನಾಡುತ್ತೀರಲ್ಲಾ, ಆಗ ತಾವು ತಮ್ಮ ಸಲಹೆಗಳನ್ನೆಲ್ಲಾ ಕೊಡಿ, ಅದಕ್ಕೆ ನಾನು ಉತ್ತರ ಕೊಡುತ್ತೇನೆ ಎಂದು ಅವರು ಹೇಳಿದ್ದಾರೆ.

ಸೋಮವಾರ ನಾವು ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯದ ಮೇಲಿನ ಚರ್ಚೆಯನ್ನು ಆರಂಭಿಸುತ್ತಿದ್ದೇವಲ್ಲ!

ಶ್ರೀ ವಾಟಾಳ್ ನಾಗರಾಜ್:- ತಾವು ಹೇಳುವುದನ್ನು ನಾನು ಒಪ್ಪುತ್ತೇನೆ. ಆದರೆ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯಲ್ಲಿ ಇದರ ಬಗ್ಗೆ ಚರ್ಚಿಸುವುದಕ್ಕಿಂತ ಇದರ ಬಗ್ಗೆ ಒಂದು ವಿಶೇಷ ಚರ್ಚೆಗೇ ತಾವು ಅವಕಾಶ ಮಾಡಿಕೊಡಬೇಕು. ನನ್ನ ಬೇಡಿಕೆ ಅಷ್ಟೇ ಇನ್ನೇನೂ ಇಲ್ಲ.

ಅಧ್ಯಕ್ಷರು:- ಆಯಿತು, ಅದರ ಬಗ್ಗೆ ನೋಡೋಣ. ನಿಮ್ಮ ಸಲಹೆ ಚೆನ್ನಾಗಿದೆ. ಆ ಬಗ್ಗೆ ಆಲೋಚನೆ ಮಾಡಿ ನೋಡೋಣ.

ಇ. ಡಾ. ಚಿತ್ತರಂಜನ್ ರವರ ಮನೆಯವರಿಗೆ ಪರಿಹಾರ ನೀಡದೇ ಇರುವ ಬಗ್ಗೆ.

ಶ್ರೀ ಶಿವಾನಂದ ನಾಯಕ್:- ಮಾನ್ಯ ಅಧ್ಯಕ್ಷರೇ, ಡಾ: ಚಿತ್ತರಂಜನ್‌ರವರ ಕೊಲೆಯಾಗಿ ಒಂದು ವರ್ಷ ಕಳೆಯುತ್ತಾ ಬಂದರೂ ಇನ್ನೂವರೆಗೆ ಅವರ ಮನೆಯವರಿಗೆ ಪರಿಹಾರ ಕೊಡಲಿಲ್ಲ. ಕೊಲೆಗೆ ಕಾರಣರಾದ ಆರೋಪಿಗಳನ್ನು ಇನ್ನೂ ಬಂಧಿಸಿಲ್ಲ.

ಆ ಕೆಲಸ ಯಾವಾಗ ಮಾಡುತ್ತೀರಿ? ಯಾವಾಗ ಪರಿಹಾರ ನೀಡುತ್ತೀರಿ? ಎಂಬ ಬಗ್ಗೆ ಸರ್ಕಾರ ಹೇಳಬೇಕು.

+ ಶ್ರೀ ಕೆ. ವಿಶ್ವೇಶ್ವರ ಹೆಗ್ಗಡೆ (ಅಂಕೋಲ):- ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರವಾದಂತಹ ವಿಷಯವಾಗಿದೆ. ಏಪ್ರಿಲ್ 10 ರಂದು ಡಾ: ಚಿತ್ತರಂಜನ್‌ರವರ ಕೊಲೆಯಾಗಿತ್ತು. ಸರ್ಕಾರ ಕೊಲೆ ಬಗ್ಗೆ ಪ್ರಾರಂಭದಲ್ಲಿ ಸಿ.ಓ.ಡಿ. ತನಿಖೆ ಅಂತ ಮಾಡಿ ನಂತರ ಅದನ್ನು ಸಿ.ಬಿ.ಐ.ಗೆ ವಹಿಸಿದೆ. ಸಿ.ಓ.ಡಿ.ಗೂ ಮತ್ತು ಸಿ.ಬಿ.ಐ.ಗೂ ಸಾಕಷ್ಟು ಗೊಂದಲ ನಿರ್ಮಾಣವಾಗಿರುವುದನ್ನು ನಾವು ನೋಡುತ್ತಿದ್ದೇವೆ. ರಾಜ್ಯ ಸರ್ಕಾರ ಸಿ.ಬಿ.ಐ ಮೇಲೆ ಒತ್ತಡ ತಂದು ಸಧ್ಯದಲ್ಲೇ ಅದು ವರದಿಯನ್ನು ಬಹಿರಂಗ ಪಡಿಸುವಂತೆ ಮಾಡಬೇಕಾಗಿದೆ. ಆ ಬಗ್ಗೆ ಇವತ್ತಿನ ಪತ್ರಿಕೆಯಲ್ಲೂ ಕೂಡ ಬಂದಿದೆ. ಸಿ.ಓ.ಡಿ.ಗಳು ಆರೋಪಿಗಳು ಯಾರು ಎಂದು ಹೇಳಿದರೆ, ಸಿ.ಬಿ.ಐ.ನವರು ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ತಯಾರಿಲ್ಲ ಎಂಬುದು ಇವತ್ತಿನ ದಿವಸ ಪತ್ರಿಕೆಯಲ್ಲೂ ಕೂಡ ವರದಿಯಾಗಿರುವುದನ್ನು ನಾವು ನೋಡಬಹುದಾಗಿದೆ. ಒಂದು ರೀತಿ ವ್ಯವಸ್ಥಿತವಾಗಿ ಈ ದುಷ್ಕೃತ್ಯವನ್ನು, ಹತ್ಯೆಯನ್ನು ಮಾಡಿರುವಂತಹವರನ್ನು ರಕ್ಷಿಸುವಂಥಾದ್ದು ನಡೆಯುತ್ತಿದೆ ಏನೋ ಎಂದು ನಮ್ಮ ಜಿಲ್ಲೆಯಲ್ಲಿ ಜನರು ಭಾವಿಸಿಕೊಳ್ಳುವಂತಾಗಿದೆ. ಇವತ್ತು ಶಾಸಕರಾಗಿದ್ದಂತಹ ಒಬ್ಬ ವ್ಯಕ್ತಿಯನ್ನು ಕೊಲೆ ಮಾಡಿದಂತಹ ಆರೋಪಿಗಳನ್ನು ಬಂಧಿಸಲಿಕ್ಕೆ ಆಗಿಲ್ಲ, ದುಷ್ಕರ್ಮಿಗಳನ್ನು ಹಿಡಿಯಲು ಆಗಲಿಲ್ಲ. ಸಿ.ಓ.ಡಿ. ಮತ್ತು ಸಿ.ಬಿ.ಐ.ಗಳ ಮಧ್ಯೆ ಈ ರೀತಿ ಗೊಂದಲಗಳು ದಿನ ಬೆಳಗಾದರೆ ಬರುತ್ತಿದ್ದರೆ ಇದು ಯಾವ ರೀತಿಯ ಹಿತಾಸಕ್ತಿ? ಏಕೆ ಇನ್ನೂ ಆರೋಪಿಗಳನ್ನು ಬಂಧಿಸಿಲ್ಲ ಎನ್ನತಕ್ಕಂತಹ ಒಂದು ಗುಮಾನಿ ಬಹಳ ದೊಡ್ಡ ರೀತಿಯಲ್ಲಿ ಮೂಡುತ್ತಿದೆ. ಹಾಗಾಗಿ ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುವುದೇನೆಂದರೆ, ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ತಕ್ಷಣದಲ್ಲಿ 'ಟೈಮ್ ಬಾಂಡ್' ಅಂದರೆ